ಕೇಳಿದೆ. ಶರಣ್ಯಾ ಎಂಬುವಳ ಮುಂದೆ ಶರಣುಹೋದೆ. ಮಟಮಟ ಮಧ್ಯಾಹ್ನ ನಿದ್ದೆಯಿಂದ ಎಬ್ಬಿಸಿ ಮಾರಲು ತಂದ ವಸ್ತುಗಳನ್ನು ಕಣ್ಮುಂದೆ ಹಿಡಿದು ಅರ್ಧಗಂಟೆ ಚಿಟ್ಟುಹಿಡಿಸಿ ಬೇಡದ್ದನ್ನು ತಲೆಗೆ ಕಟ್ಟಿಹೋಗುತ್ತಾರಲ್ಲಾ ನೆನಪಿದೆಯೇ? ಈಕೆಯೂ ಅಂಥವರ ಗೋತ್ರಕ್ಕೆ ಸೇರಿದವಳು. ಕಣ್ಣಿನ ಪೊರೆಗೆ ಕಾರಣ (ಯಥಾ ಪ್ರಕಾರ ವಯಸ್ಸಾಗೋದು), ಶಸ್ತ್ರಚಿಕಿತ್ಸೆಯ ಸರಳತೆ, ಮಾಡಿಸಿಕೊಂಡರೆ ಆಗುವ ಲಾಭ ಎಲ್ಲವನ್ನೂ ಒದರಿ ತನ್ನ ವಾಕ್‌ಪಟುತ್ವದಿಂದ ನನ್ನನ್ನು ಸಂಪೂರ್ಣ ಗೆದ್ದುಬಿಟ್ಟಳು. ಆ ಮಾತಿನ ಮೋಡಿ ಹೇಗಿತ್ತೆಂದರೆ ಪೊರೆ ಬೆಳೆಯದಿದ್ದವರೂ ನನಗೂ ಶಸ್ತ್ರಚಿಕಿತ್ಸೆ ಮಾಡಿ ಪುಣ್ಯ ಕಟ್ಟಿಕೊಳ್ಳಿ ಎಂದು ಕೇಳುವಷ್ಟು! ಸಮ್ಮೋಹನಕ್ಕೊಳಗಾಗಿ ಆಕೆ ಕೊಟ್ಟ ಫಾರಂಗೆ ಸಹಿಹಾಕಿ ತಗಲುವ ವೆಚ್ಚವನ್ನು ಸಾಲದ ಕಾರ್ಡಿನಿಂದ ತುಂಬಿದೆ. ಅವಳೇ ಮುಂದಾಗಿ ನಿಂತು ಆರೋಗ್ಯ ತಪಾಸಣೆ ಮಾಡಿಸಿ ಮಾತ್ರೆ, ಕಣ್ಣಿಗೆ ಡ್ರಾಪನ್ನು ಕೊಟ್ಟಳು. "ನಾಳೆ ಒಂಬತ್ತಕ್ಕೆ ಬಂದುಬಿಡಿ. ಬರುವ ಮುನ್ನ ಸಿಕ್ಕಾಪಟ್ಟೆ ತಿಂದುಗಿಂದೀರಿ. ಕೇವಲ ಒಂದ್ಗಪ್ಪು ಕಾಫಿ ಅಷ್ಟೇ'' ಎಂದು ಸಾರಿಸಾರಿ ಹೇಳಿ ಬೀಳ್ಕೊಟ್ಟಳು.

ನನಗೆ ಆಪ್ರೇಶನ್ ಎಂದೊಡನೆ ಮನೆಯಲ್ಲಿ ಇನ್ನೆಂತಹ ಆತಂಕದ ಸಂಚಲನ ಉಂಟಾಗಬಹುದೆಂಬ ಭಾರೀ ನಿರೀಕ್ಷೆಯಿಂದ ಮನೆಗೆ ಬಂದು ಸಾರಿದರೆ ಸಂಚಲನ ಇರಲಿ ಒಂದು ಹುಲ್ಲು ಕಡ್ಡಿಯೂ ಅಲುಗಲಿಲ್ಲ. "ಆಪ್ರೇಶನ್ನಾ? ಮಾಡಸ್ಕೋ ಮಾಡಸ್ಕೋ. ವಯಸ್ಸಾದಮೇಲೆ ಇದೆಲ್ಲಾ ಮಾಮೂಲು" ಎಂದು ನನ್ನ ವಯಸ್ಸನ್ನು ಎತ್ತಿಹೇಳಿ ನನ್ನವರು ಹೊಟ್ಟೆ ಉರಿಸಿದರು. "ಎಲ್ಲಾ ಹೋಗಿ ಇದಕ್ಕೆ ಆಪ್ರೇಶನ್ ಪಟ್ಟ ಕಟ್ತೀಯಲ್ಲಮ್ಮಾ. ಬೆಳೆದಿರೋ ಉಗುರು ಕಿತ್ತುಹಾಕೊಳ್ಳೋ ಹಾಗಿದು, ಅಷ್ಟೇ" ಎಂದ ಮಗರಾಯ ನಗುತ್ತಾ.

"ನಮ್ಮಮ್ಮ ಒಂದಿನ ವಾಕಿಂಗಿಗೆ ಅಂತ ಒಬ್ಬರೇ ಹೋಗಿ ಮಾಡಿಸ್ಕೊಂಡು ನಡ್ಕೊಂಡೇ ಬಂದ್ಬಿಟ್ರು. ಹಾಗೆಲ್ಲ ಮತ್ತೊಬ್ರಿಗೆ ತೊಂದ್ರೆ ಕೊಡೋ ಪೈಕಿ ಅಲ್ಲಾ ನಮ್ಮಮ್ಮ." ಸೊಸೆ ತನ್ನಮ್ಮನನ್ನು ಹೊಗಳಿಕೊಳ್ಳುತ್ತಾ ನನಗೂ ಚುರುಕು ಮುಟ್ಟಿಸಿದಳು.

"ನಾಳೆ ನಂಜೊತೆ ಆಸ್ಪತ್ರೆಗೆ ಬರ್ತಿರಾ?" ಕೈ ಹಿಡಿದು ಸಪ್ತಪದಿ ತುಳಿಸಿದವರನ್ನು ಕೇಳಿದೆ. ಅವರೇನನ್ನುತ್ತಿದ್ದರೋ. ನನ್ನ ಸೊಸೆ ಮುನ್ನುಗ್ಗಿ ಮೂಗು ತೂರಿಸಿದಳು.

"ಅದ್ಹೇಗೆ ಬರ್ತಾರೆ ಅತ್ತೆ? ಪುಟ್ಟಿ ಸ್ಕೂಲಿಂದ ಬರೋ ಹೊತ್ತಿಗೆ ಮನೇಲಿ ಯಾರಾದ್ರೂ ಇರ್ಬೇಕಲ್ಲಾ."

"ಹಾಗಾದ್ರೆ ನೀನು ಬರ್ತಿಯಾ?" ಅವಳನ್ನೇ ಕೇಳಿದೆ.

"ನಾನಾ? ಹೋದ್ವಾರ ನಮ್ಮಮ್ಮನ ಹುಟ್ಟಿದಹಬ್ಬಕ್ಕೆ ಎರಡುದಿನ ರಜೆಯಲ್ಲಿದ್ದೆ. ಈಗ ಯಾವ ಮುಖವಿಟ್ಕೊಂಡು ಮತ್ತೆ ರಜಾ ಕೇಳಲಿ? ಬೇಕಿದ್ರೆ ನಾಳೆ ಒಂದಿನ ಬೇಗ್ನೆದ್ದು ಒಂದು ಅನ್ನ ಸಾರು ಮಾಡಿ ಇಡ್ತೀನಿ. ನೀವು ಹೋಗ್ಬನ್ನಿ" ಪರವಾನಗಿ ಇತ್ತಳು!

"ಅಮ್ಮಾ ನಂಗೆ ರಜ ಇಲ್ಲ. ನಾಳೆ ಆಫಿಸಿಗೆ ಎರಡು ಗಂಟೆ ತಡವಾಗಿ ಬರೋಕ್ಕೆ ಪರವಾನಗಿ ತೊಗೊಂಡು ನಿಂಜೊತೆ ಬರ್ತೀನಿ. ಸರೀನಾ?" ಎಂದ ಮಗ.

ಆಂದು ರಾತ್ರಿ ಪೂರಾ ಎಂಥದ್ದೋ ಆತಂಕ, ಭೀತಿ. ಕಣ್ಮುಚ್ಚಿದರೆ ಸಾಕು. ಕೆಂಪು ಕಣ್ಣು, ಕೋರೆ ಹಲ್ಲು, ಚೂಪು ಉಗುರಿನ ರಾಕ್ಷಸ ಆರ್ಭಟಿಸುತ್ತಾ ಕಣ್ಣು ಕೀಳಲು ಪ್ರಯತ್ನಿಸುತ್ತಿದ್ದ. ಬೆದರಿ ಕಣ್ತೆರೆಯುತ್ತಿದ್ದೆ. ನಿದ್ದೆ ಇಲ್ಲದೆ ಬೇಗನೆದ್ದವಳು ಮುಖ ತೊಳೆದು ಕಾಫಿ ಮಾಡಿ ಕುಡಿದೆ. ಅದೇಕೋ ಅಂದು ಎಂದಿಲ್ಲದ ಹಸಿವು! ಅಲ್ಲಿಯವರೆಗೆ ಕ್ಯಾರೇ ಎನ್ನದಿದ್ದ ಮನೆಯವರು ಬಲು ಕಾಳಜಿಯಿಂದ ನಾನು ಮತ್ತೇನೂ ಬಾಯಿಗೆ ಹಾಕದಂತೆ ಕಾವಲು ಕಾದು ಕಳಿಸಿಕೊಟ್ಟರು.

★★★

ಕ್ರೂರವಾಗಿ ಕಂಡ ದಾದಿಯೊಬ್ಬಳು ಒಳಕರೆದೊಯ್ದಳು. "ಹಾಕಿರುವ ಆಭರಣ ತೆಗೆದುಬಿಡಿ"